# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 121 |
| ಸದಸ್ಯರ ಹೆಸರು | : | ಶ್ರೀ ಬಿ.ಕೆ ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13-12-2021. |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕೊಡ ಮಾಡುವ 2020-21ನೇ ಸಾಲಿನಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯಾದ ಸಾಧಕರ ವಿವರಗಳೇನು;<br>(ಪಟ್ಟಿ ನೀಡುವುದು) | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕೊಡ ಮಾಡುವ 2020-21ನೇ ಸಾಲಿನಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯಾದ ಸಾಧಕರ ಪಟ್ಟಿಯನ್ನು ಅನುಬಂಧ -1 ರಲ್ಲಿ ಇರಿಸಿದೆ |
| ಆ | ಸದರಿ ಪ್ರಶಸ್ತಿಗೆ ಅರ್ಹ ಸಾಧಕರ ಆಯ್ಕೆಗೆ ಅನುಸರಿಸಿದ ಮಾನದಂಡವೇನು? (ಸಂಪೂರ್ಣ ವಿಸ್ತೃತ ಮಾಹಿತಿ ಒದಗಿಸುವುದು) | ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಮಾಡಲು ಇರುವ ಮಾನದಂಡಗಳ ಸರ್ಕಾರದ ಮಾರ್ಗಸೂಚಿಯನ್ನು ಅನುಬಂಧ-2ರಲ್ಲಿ ಇರಿಸಿದೆ |

ಸಂಖ್ಯೆ: ಕಸಂವಾ 73 ಕವಿಸ 2021

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ - 1

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರಿಗೆ 2020ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುವ ಕುರಿತು.

* * * * *

**ಪ್ರಸ್ತಾವನೆ:**

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯ ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ ಪ್ರತಿ ವರ್ಷವು ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುವ ಸತ್ಸಂಪ್ರದಾಯವನ್ನು ಸರ್ಕಾರವು ಅನುಸರಿಸುತ್ತಾ ಬಂದಿದೆ. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರಿಗೆ/ಸಂಸ್ಥೆಗಳಿಗೆ 2020ನೇ ಸಾಲಿನಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲು ಸರ್ಕಾರವು ನಿರ್ಧರಿಸಿ ಕೆಳಕಂಡಂತೆ ಆದೇಶ ಹೊರಡಿಸಲು ಉದ್ದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 206 ಕಸಧ 2020**
**ಬೆಂಗಳೂರು, ದಿನಾಂಕ:28-10-2020.**

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರಿಗೆ/ಸಂಸ್ಥೆಗಳಿಗೆ ರಾಜ್ಯೋತ್ಸವದ ಸಂದರ್ಭದಲ್ಲಿ ಅನುಬಂಧದಲ್ಲಿ ತೋರಿಸಿರುವಂತೆ 2020ನೇ ಸಾಲಿನಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲು ಸರ್ಕಾರವು ಹರ್ಷಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

[ಹೆಚ್.ಕೆ. ಸುರೇಶಬಾಬು]
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಸಂಸ್ಕೃತಿ).

28/10/20

ಗೆ:

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ಅಪರ ಮುಖ್ಯ ಕಾರ್ಯದರ್ಶಿಗಳು/ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು
5. ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು - ಪತ್ರಿಕೆಗಳಲ್ಲಿ ಈ ವಿಷಯದ ಬಗ್ಗೆ ಸೂಕ್ತ ಪ್ರಕಟಣೆ ನೀಡುವ ಸಲುವಾಗಿ
7. ಎಲ್ಲಾ ಪ್ರಶಸ್ತಿ ಪುರಸ್ಕೃತರಿಗೆ (ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಮುಖಾಂತರ)
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ

**ಸರ್ಕಾರಿ ಆದೇಶ ಸಂಖ್ಯೆ:ಕಸಂವಾ 206 ಕಸಧ 2020, ದಿನಾಂಕ:28-10-2020 ರ**

## ಅನುಬಂಧ

### ಸಾಹಿತ್ಯ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 1 | 1 | ಶ್ರೀ ಪ್ರೊ॥ ಸಿ.ಪಿ. ಸಿದ್ಧಾಶ್ರಮ, ಧಾರವಾಡ. | ಸಾಹಿತ್ಯ |
| 2 | 2 | ಶ್ರೀ ವಿ. ಮುನಿ ವೆಂಕಟಪ್ಪ, ಕೋಲಾರ. | ಸಾಹಿತ್ಯ |
| 3 | 3 | ಶ್ರೀ ರಾಮಣ್ಣ ಬ್ಯಾಟಿ (ವಿಶೇಷ ಚೇತನ), ಗದಗ. | ಸಾಹಿತ್ಯ |
| 4 | 4 | ಶ್ರೀ ವಲೇರಿಯನ್ ಡಿಸೋಜ (ವಲ್ಲಿವಗ್ಗ), ದಕ್ಷಿಣ ಕನ್ನಡ. | ಸಾಹಿತ್ಯ |
| 5 | 5 | ಶ್ರೀ ಡಿ.ಎನ್. ಅಕ್ಕಿ, ಯಾದಗಿರಿ. | ಸಾಹಿತ್ಯ |

### ಸಂಗೀತ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 6 | 1 | ಶ್ರೀ ಹಂಬಯ್ಯ ನೂಲಿ, ರಾಯಚೂರು. | ಸಂಗೀತ |
| 7 | 2 | ಶ್ರೀ ಅನಂತ ತೇರದಾಳ, ಬೆಳಗಾವಿ. | ಸಂಗೀತ |
| 8 | 3 | ಶ್ರೀ ಬಿ.ವಿ. ಶ್ರೀನಿವಾಸ್, ಬೆಂಗಳೂರು ನಗರ. | ಸಂಗೀತ |
| 9 | 4 | ಶ್ರೀ ಗಿರಿಜಾ ನಾರಾಯಣ, ಬೆಂಗಳೂರು ನಗರ | ಸಂಗೀತ |
| 10 | 5 | ಶ್ರೀ ಕೆ. ಲಿಂಗಪ್ಪ ಶೇರಿಗಾರ ಕಟೀಲು, ದಕ್ಷಿಣ ಕನ್ನಡ. | ಸಂಗೀತ |

### ನ್ಯಾಯಾಂಗ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 11 | 1 | ಶ್ರೀ ಕೆ. ಎನ್. ಭಟ್, ಬೆಂಗಳೂರು. | ನ್ಯಾಯಾಂಗ |
| 12 | 2 | ಶ್ರೀ ಎಂ.ಕೆ. ವಿಜಯಕುಮಾರ, ಉಡುಪಿ. | ನ್ಯಾಯಾಂಗ |

## ಮಾಧ್ಯಮ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 13 | 1 | ಶ್ರೀ ಸಿ. ಮಹೇಶ್ವರನ್, ಮೈಸೂರು | ಮಾಧ್ಯಮ |
| 14 | 2 | ಶ್ರೀ ಟಿ. ವೆಂಕಟೇಶ್ (ಈ ಸಂಜೆ), ಬೆಂಗಳೂರು ನಗರ. | ಮಾಧ್ಯಮ |

## ಯೋಗ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 15 | 1 | ಡಾ|| ಎ.ಎಸ್. ಚಂದ್ರಶೇಖರ, ಮೈಸೂರು. | ಯೋಗ |

## ಶಿಕ್ಷಣ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 16 | 1 | ಶ್ರೀ ಎಂ.ಎಸ್. ಷಡಕ್ಷರಿ, ಚಿಕ್ಕಮಗಳೂರು. | ಶಿಕ್ಷಣ |
| 17 | 2 | ಡಾ|| ಆರ್. ರಾಮಕೃಷ್ಣ, ಚಾಮರಾಜನಗರ. | ಶಿಕ್ಷಣ |
| 18 | 3 | ಡಾ|| ಎಂ.ಜಿ. ಈಶ್ವರಪ್ಪ, ದಾವಣಗೆರೆ. | ಶಿಕ್ಷಣ |
| 19 | 4 | ಡಾ|| ಪುಟ್ಟಸಿದ್ದಯ್ಯ, ಮೈಸೂರು. | ಶಿಕ್ಷಣ |
| 20 | 5 | ಶ್ರೀ ಅಶೋಕ್ ಶೆಟ್ಟರ್, ಬೆಳಗಾವಿ. | ಶಿಕ್ಷಣ |
| 21 | 6 | ಶ್ರೀ ಡಿ.ಎಸ್. ದಂಡಿನ್, ಗದಗ. | ಶಿಕ್ಷಣ |

## ಹೊರನಾಡು ಕನ್ನಡಿಗ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 22 | 1 | ಶ್ರೀ ಕುಸುಮೋದರದೇರಣ್ಣ ಶೆಟ್ಟಿ ಕೇಲ್ತಡ್ಕ, ದಕ್ಷಿಣ ಕನ್ನಡ. | ಹೊರನಾಡು ಕನ್ನಡಿಗ |
| 23 | 2 | ಶ್ರೀ ವಿದ್ಯಾ ಸಿಂಹಾಚಾರ್ಯ ಮಾಹುಲಿ, ಮಹಾರಾಷ್ಟ್ರ ಮುಲುಂಡ ಮುಂಬೈ. | ಹೊರನಾಡು ಕನ್ನಡಿಗ |

## ಕ್ರೀಡೆ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 24 | 1 | ಶ್ರೀ ಹೆಚ್.ಬಿ. ನಂಜೇಗೌಡ, ತುಮಕೂರು. | ಕ್ರೀಡೆ |
| 25 | 2 | ಶ್ರೀಮತಿ ಉಷಾರಾಣಿ, ಬೆಂಗಳೂರು ನಗರ. | ಕ್ರೀಡೆ |

## ಸಂಕೀರ್ಣ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 26 | 1 | ಡಾ|| ಕೆ.ವಿ. ರಾಜು, ಕೋಲಾರ. | ಸಂಕೀರ್ಣ |
| 27 | 2 | ಶ್ರೀ ನಂ. ವೆಂಕೋಬರಾವ್, ಹಾಸನ. | ಸಂಕೀರ್ಣ |
| 28 | 3 | ಡಾ|| ಕೆ.ಎಸ್. ರಾಜಣ್ಣ (ವಿಶೇಷ ಚೇತನ), ಮಂಡ್ಯ. | ಸಂಕೀರ್ಣ |
| 29 | 4 | ಶ್ರೀ ವಿ. ಲಕ್ಷ್ಮಿನಾರಾಯಣ (ನಿರ್ಮಾಣ್), ಮಂಡ್ಯ. | ಸಂಕೀರ್ಣ |

## ಸಂಘ-ಸಂಸ್ಥೆ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 30 | 1 | ಯುತ್ ಫಾರ್ ಸೇವಾ, ಬೆಂಗಳೂರು ನಗರ. | ಸಂಘ-ಸಂಸ್ಥೆ |
| 31 | 2 | ದೇವದಾಸಿ ಸ್ವಾವಲಂಬನ ಕೇಂದ್ರ, ಬಳ್ಳಾರಿ. | ಸಂಘ-ಸಂಸ್ಥೆ |
| 32 | 3 | ಬೆಟರ್ ಇಂಡಿಯಾ, ಬೆಂಗಳೂರು ನಗರ. | ಸಂಘ-ಸಂಸ್ಥೆ |
| 33 | 4 | ಯುವ ಬ್ರಿಗೇಡ್, ಬೆಂಗಳೂರು ಗ್ರಾಮಾಂತರ. | ಸಂಘ-ಸಂಸ್ಥೆ |
| 34 | 5 | ಧರ್ಮೋತ್ಥಾನ ಟ್ರಸ್ಟ್, ಧರ್ಮಸ್ಥಳ, ದಕ್ಷಿಣ ಕನ್ನಡ. | ಸಂಘ-ಸಂಸ್ಥೆ |

## ಸಮಾಜಸೇವೆ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 35 | 1 | ಶ್ರೀ ಎನ್.ಎಸ್. (ಕುಂದರಗಿ) ಹೆಗಡೆ, ಉತ್ತರ ಕನ್ನಡ. | ಸಮಾಜಸೇವೆ |
| 36 | 2 | ಶ್ರೀಮತಿ ಪ್ರೇಮಾ ಕೋದಂಡರಾಮ ಶ್ರೇಷ್ಠಿ, ಚಿಕ್ಕಮಗಳೂರು. | ಸಮಾಜಸೇವೆ |
| 37 | 3 | ಶ್ರೀ ಮಣೆಗಾರ್ ಮೀರಾನ್ ಸಾಹೇಬ್, ಉಡುಪಿ. | ಸಮಾಜಸೇವೆ |
| 38 | 4 | ಶ್ರೀಮತಿ ಮೋಹಿನಿ ಸಿದ್ದೇಗೌಡ, ಚಿಕ್ಕಮಗಳೂರು. | ಸಮಾಜಸೇವೆ |

## ವೈದ್ಯಕೀಯ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 39 | 1 | ಡಾ॥ ಅಶೋಕ ಸೊನ್ನದ್, ಬಾಗಲಕೋಟೆ. | ವೈದ್ಯಕೀಯ |
| 40 | 2 | ಡಾ॥ ಬಿ.ಎಸ್. ಶ್ರೀನಾಥ, ಶಿವಮೊಗ್ಗ. | ವೈದ್ಯಕೀಯ |
| 41 | 3 | ಡಾ॥ ಎ. ನಾಗರತ್ನ, ಬಳ್ಳಾರಿ | ವೈದ್ಯಕೀಯ |
| 42 | 4 | ಡಾ॥ ವೆಂಕಟಪ್ಪ, ರಾಮನಗರ. | ವೈದ್ಯಕೀಯ |

## ಕೃಷಿ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 43 | 1 | ಶ್ರೀ ಸುರತ್ ಸಿಂಗ್ ಕನೂರ್ ಸಿಂಗ್ ರಜಪುತ್. ಬೀದರ್. | ಕೃಷಿ |
| 44 | 2 | ಶ್ರೀಮತಿ ಎಸ್. ವಿ. ಸುಮಂಗಲಮ್ಮ ವೀರಭದ್ರಪ್ಪ, ಚಿತ್ರದುರ್ಗ. | ಕೃಷಿ |
| 45 | 3 | ಡಾ॥ ಸಿದ್ರಾಮಪ್ಪ ಬಸವಂತರಾವ್ ಪಾಟೀಲ್. ಕಲಬುರಗಿ. | ಕೃಷಿ |

## ಪರಿಸರ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 46 | 1 | ಶ್ರೀ ಅಮರ ನಾರಾಯಣ, ಚಿಕ್ಕಬಳ್ಳಾಪುರ. | ಪರಿಸರ |
| 47 | 2 | ಶ್ರೀ ಎನ್.ಡಿ. ಪಾಟೀಲ್, ವಿಜಯಪುರ. | ಪರಿಸರ |

## ವಿಜ್ಞಾನ/ತಂತ್ರಜ್ಞಾನ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 48 | 1 | ಶ್ರೀ ಪ್ರೊ॥ ಉಡುಪಿ ಶ್ರೀನಿವಾಸ, ಉಡುಪಿ. | ವಿಜ್ಞಾನ/ತಂತ್ರಜ್ಞಾನ |
| 49 | 2 | ಡಾ॥ ಚಿಂದಿ ವಾಸುದೇವಪ್ಪ, ಶಿವಮೊಗ್ಗ. | ವಿಜ್ಞಾನ/ತಂತ್ರಜ್ಞಾನ |

## ಸಹಕಾರ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 50 | 1 | ಡಾ॥ ಸಿ.ಎನ್. ಮಂಚೇಗೌಡ, ಬೆಂಗಳೂರು ನಗರ. | ಸಹಕಾರ |

## ಬಯಲಾಟ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 51 | 1 | ಶ್ರೀಮತಿ ಕೆಂಪವ್ವ ಹರಿಜನ, ಬೆಳಗಾವಿ. | ಬಯಲಾಟ |
| 52 | 2 | ಶ್ರೀ ಚೆನ್ನಬಸಪ್ಪ ಬೆಂಡಿಗೇರಿ, ಹಾವೇರಿ. | ಬಯಲಾಟ |

## ಯಕ್ಷಗಾನ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 53 | 1 | ಶ್ರೀ ಬಂಗಾರ್ ಅಚಾರಿ, ಚಾಮರಾಜನಗರ. | ಯಕ್ಷಗಾನ |
| 54 | 2 | ಶ್ರೀ ಎಂ.ಕೆ. ರಮೇಶ್ ಅಚಾರ್ಯ, ಶಿವಮೊಗ್ಗ. | ಯಕ್ಷಗಾನ |

**ರಂಗಭೂಮಿ**

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 55 | 1 | ಶ್ರೀಮತಿ ಅನಸೂಯಮ್ಮ, ಹಾಸನ. | ರಂಗಭೂಮಿ |
| 56 | 2 | ಶ್ರೀ ಹೆಚ್. ಷಡಾಕ್ಷರಪ್ಪ, ದಾವಣಗೆರೆ. | ರಂಗಭೂಮಿ |
| 57 | 3 | ಶ್ರೀ ತಿಪ್ಪೇಸ್ವಾಮಿ, ಚಿತ್ರದುರ್ಗ. | ರಂಗಭೂಮಿ |

**ಚಲನಚಿತ್ರ**

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 58 | 1 | ಶ್ರೀ ಬಿ.ಎಸ್. ಬಸವರಾಜ್, ತುಮಕೂರು. | ಚಲನಚಿತ್ರ |
| 59 | 2 | ಶ್ರೀ ಆಪಾಢಾಂಡ ತಿಮ್ಮಯ್ಯ ರಘು (ಎ.ಟಿ. ರಘು), ಕೊಡಗು. | ಚಲನಚಿತ್ರ |

**ಚಿತ್ರಕಲೆ**

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 60 | 1 | ಶ್ರೀ ಎಂ.ಜೆ. ವಾಚೇದ್ ಮಠ, ಧಾರವಾಡ. | ಚಿತ್ರಕಲೆ |

**ಜಾನಪದ**

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 61 | 1 | ಶ್ರೀ ಗುರುರಾಜ ಹೊಸಕೋಟೆ, ಬಾಗಲಕೋಟೆ. | ಜಾನಪದ |
| 62 | 2 | ಡಾ॥ ಹಂಪನಹಳ್ಳಿ ತಿಮ್ಮೇಗೌಡ, ಹಾಸನ. | ಜಾನಪದ |

ಶಿಲ್ಪಕಲೆ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 63 | 1 | ಶ್ರೀ ಎನ್.ಎಸ್. ಜನಾರ್ಧನ ಮೂರ್ತಿ, ಮೈಸೂರು. | ಶಿಲ್ಪಕಲೆ |

ನೃತ್ಯ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 64 | 1 | ನಾಟ್ಯ ವಿದುಷಿ ಜ್ಯೋತಿ ಪಟ್ಟಾಭಿರಾಮ್ | ನೃತ್ಯ |

ಜಾನಪದ/ತೊಗಲು ಗೊಂಬೆಯಾಟ

| ಕ್ರಮ ಸಂಖ್ಯೆ | ಕ್ಷೇತ್ರಾವಾರು ಸಂಖ್ಯೆ | ಹೆಸರು | ಕ್ಷೇತ್ರ |
|---|---|---|---|
| 65 | 1 | ಶ್ರೀ ಕೇಶಪ್ಪ ಶಿಳ್ಳೆಕ್ಯಾತರ, ಕೊಪ್ಪಳ. | ಜಾನಪದ/ತೊಗಲು ಗೊಂಬೆಯಾಟ |

[ಹೆಚ್.ಕೆ. ಸುರೇಶಬಾಬು]
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಸಂಸ್ಕೃತಿ).

ಅನುಬಂಧ-2



## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕುರಿತಂತೆ ಮಾರ್ಗಸೂಚಿ ನಿಯಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ: 1) ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ರಿಟ್ ಅರ್ಜಿ 47197/2015ರಲ್ಲಿ ದಿ:18-7-2016ರಂದು ನೀಡಿದ ಆದೇಶ.

2) ಸರ್ಕಾರದ ಆದೇಶ ಸಂಖ್ಯೆ:ಕಸಂವಾ 222 ಕಸಧ 2016, ದಿ:26-07-2016.

3) ನ್ಯಾ ಹೆಚ್.ಎನ್.ನಾಗಮೋಹನ ದಾಸ್ ಇವರ ಅಧ್ಯಕ್ಷತೆಯಲ್ಲಿ ದಿ:24-9-2016ರಂದು ನಡೆದ ರಾಜ್ಯೋತ್ಸವ ಪ್ರಶಸ್ತಿ ಮಾರ್ಗಸೂಚಿ ನಿರೂಪಣಾ ಸಮಿತಿ ಸಭೆಯ ನಡವಳಿ.

4) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಪತ್ರ ಸಂಖ್ಯೆ:ಕಸನಿ/3/ರಾ.ಪ್ರ.ಸಮಿತಿ/2016-17, ದಿ:16-01-2017.

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ರಿಟ್ ಅರ್ಜಿ 47197/2015ರಲ್ಲಿ ದಿ:18-7-2016ರಂದು ನೀಡಿದ ಆದೇಶದಂತೆ, ಪ್ರತೀ ವರ್ಷ ನವೆಂಬರ್ ಒಂದನೇ ತಾರೀಖಿನಂದು ನೀಡಲಾಗುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ವಿವಿಧ ಕ್ಷೇತ್ರಗಳಿಂದ ಸಾಧಕರನ್ನು ಆಯ್ಕೆ ಮಾಡಲು ಮಾರ್ಗಸೂಚಿಗಳನ್ನು ರಚಿಸುವುದಕ್ಕಾಗಿ ಮೇಲೆ (2)ರಲ್ಲಿ ಓದಲಾದ ದಿನಾಂಕ:26-7-2016ರ ಆದೇಶದಲ್ಲಿ ಈ ಕೆಳಕಂಡ ಆಯ್ಕೆ ಸಮಿತಿಯನ್ನು ರಚಿಸಿದೆ.

| | | | |
|---|---|---|---|
| 1 | ನ್ಯಾ ನಾಗಮೋಹನ ದಾಸ್ | ನ್ಯಾಯಾಂಗ | ಅಧ್ಯಕ್ಷರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ, ಬೆಂಗಳೂರು | - | ಸದಸ್ಯರು |
| 3 | ಡಾ॥ ಬರಗೂರು ರಾಮಚಂದ್ರಪ್ಪ, ಬೆಂಗಳೂರು | ಸಾಹಿತ್ಯ | ಸದಸ್ಯರು |
| 4 | ಡಾ॥ ಬಿ.ವಿ. ರಾಜಾರಾಂ, ಬೆಂಗಳೂರು | ರಂಗಭೂಮಿ | ಸದಸ್ಯರು |
| 5 | ಪಂ.ವೆಂಕಟೇಶ್‌ಕುಮಾರ್, ಬೆಂಗಳೂರು | ಸಂಗೀತ | ಸದಸ್ಯರು |
| 6 | ಡಾ॥ಚೂಡಾಮಣಿ ನಂದಗೋಪಾಲ್, ಬೆಂಗಳೂರು | ನೃತ್ಯ | ಸದಸ್ಯರು |
| 7 | ಶ್ರೀ ಚಂದ್ರನಾಥ ಆಚಾರ್ಯ, ಬೆಂಗಳೂರು | ಚಿತ್ರಕಲೆ | ಸದಸ್ಯರು |
| 8 | ಶ್ರೀ ವೆಂಕಟಾಚಲಪತಿ, ಬೆಂಗಳೂರು | ಶಿಲ್ಪಕಲೆ | ಸದಸ್ಯರು |
| 9 | ಶ್ರೀಮತಿ ಅನುಪಮಾ ಹೊಸಕೆರೆ, ಬೆಂಗಳೂರು | ಬಯಲಾಟ | ಸದಸ್ಯರು |
| 10 | ಶ್ರೀ ಅಪ್ಪಗೆರೆ ತಿಮ್ಮರಾಜು, ಬೆಂಗಳೂರು | ಜಾನಪದ | ಸದಸ್ಯರು |
| 11 | ಶ್ರೀ ಸುರೇಶ್ ಹೆಬ್ಳೀಕರ್, ಬೆಂಗಳೂರು | ಕೃಷಿ-ಪರಿಸರ | ಸದಸ್ಯರು |
| 12 | ಶ್ರೀ ಸುಧೀಂದ್ರ ಹಾಲ್ದೊಡ್ಡೇರಿ, ಬೆಂಗಳೂರು | ವಿಜ್ಞಾನ | ಸದಸ್ಯರು |
| 13 | ಡಾ॥ ನಾ.ಸೋಮೇಶ್ವರ, ಬೆಂಗಳೂರು | ವೈದ್ಯಕೀಯ | ಸದಸ್ಯರು |
| 14 | ಶ್ರೀ ನಾಗಾಭರಣ, ಬೆಂಗಳೂರು | ಚಲನಚಿತ್ರ | ಸದಸ್ಯರು |
| 15 | ಶ್ರೀ ಕಿಶನ್ ಹೆಗಡೆ, ಬೆಂಗಳೂರು | ಯಕ್ಷಗಾನ | ಸದಸ್ಯರು |
| 16 | ಡಾ॥ ಸಿದ್ಧಲಿಂಗಯ್ಯ, ಬೆಂಗಳೂರು | ಕವಿ | ಸದಸ್ಯರು |
| 17 | ಶ್ರೀ ನಾಗೇಶ್ ಹೆಗಡೆ, ಬೆಂಗಳೂರು | ಮಾಧ್ಯಮ | ಸದಸ್ಯರು |
| 18 | ಶ್ರೀಮತಿ ಮಾಲತಿ ಹೊಳ್ಳ, ಬೆಂಗಳೂರು | ಕ್ರೀಡೆ | ಸದಸ್ಯರು |
| 19 | ಪ್ರೊ.ಎಸ್.ಜಿ.ಸಿದ್ಧರಾಮಯ್ಯ, ಬೆಂಗಳೂರು | ಸಾಹಿತ್ಯ | ಸದಸ್ಯರು |
| 20 | ಶ್ರೀ ಕಾ.ತ.ಚಿಕ್ಕಣ್ಣ, ಬೆಂಗಳೂರು | ಸಾಹಿತ್ಯ | ಸದಸ್ಯರು |
| 21 | ಪ್ರೊ.ಮರುಳಸಿದ್ದಪ್ಪ, ಬೆಂಗಳೂರು | ಸಾಹಿತ್ಯ | ಸದಸ್ಯರು |
| 22 | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | - | ಸದಸ್ಯ ಕಾರ್ಯದರ್ಶಿ |

ಮೇಲೆ (2)ರಲ್ಲಿ ಓದಲಾದ ಆಯ್ಕೆ ಸಮಿತಿಯ ನಡವಳಿಯಲ್ಲಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಮಾಡಲು ಮಾರ್ಗಸೂಚಿ ನಿಯಮಗಳನ್ನು ರಚಿಸಿ ದಿನಾಂಕ:24-9-2016ರಂದು ವರದಿಯನ್ನು ಸಲ್ಲಿಸಿರುತ್ತದೆ.

ಅದರಂತೆ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ನ್ಯಾ ಹೆಚ್.ಎನ್.ನಾಗಮೋಹನ ದಾಸ್, ವಿಶ್ರಾಂತ ನ್ಯಾಯಮೂರ್ತಿಗಳು ಹಾಗೂ ಅಧ್ಯಕ್ಷರು, ರಾಜ್ಯ ಪ್ರಶಸ್ತಿ ಆಯ್ಕೆ ಸಂಬಂಧ ಮಾರ್ಗಸೂಚಿ/ಮಾನದಂಡ ರಚನೆ ಸಮಿತಿಯು ಸಲ್ಲಿಸಿರುವ ವರದಿಯಂತೆ, ವಿವಿಧ ಕ್ಷೇತ್ರಗಳ ಸಾಧಕರನ್ನು ಆಯ್ಕೆ ಮಾಡಲು ಪಾಲಿಸಬೇಕಾದ ಮಾರ್ಗಸೂಚಿಗಳನ್ನು ಒಳಗೊಂಡ ಆದೇಶವನ್ನು ಹೊರಡಿಸಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 222 ಕಸಧ 2016, ಬೆಂಗಳೂರು, ದಿನಾಂಕ:02-02-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಪ್ರತೀ ವರ್ಷ ನವೆಂಬರ್ ಒಂದನೇ ತಾರೀಖಿನಂದು ಪ್ರದಾನ ಮಾಡುವ 'ರಾಜ್ಯೋತ್ಸವ ಪ್ರಶಸ್ತಿ'ಗೆ ವಿವಿಧ ಕ್ಷೇತ್ರಗಳಿಂದ ಸಾಧಕರನ್ನು ಆಯ್ಕೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Malati PS 2/2/17

(ಪಿ.ಎಸ್. ಮಾಲತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.
(ಸಂಸ್ಕೃತಿ ಶಾಖೆ)

ಗೆ:

1) ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
2) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲಾ ಸಹಾಯಕ ನಿರ್ದೇಶಕರುಗಳಿಗೆ (ನಿರ್ದೇಶಕರ ಮುಖಾಂತರ).
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

# ಸರ್ಕಾರದ ಆದೇಶ ಸಂಖ್ಯೆ: ಕಸಂವಾ 222 ಕಸಧ 2016, ದಿನಾಂಕ:02-02-2017ಕ್ಕೆ

## ಅನುಬಂಧ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಪ್ರದಾನ ಮಾಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕುರಿತಂತೆ ಅನುಸರಿಸಬೇಕಾದ ಮಾರ್ಗಸೂಚಿಗಳು.**

1. ಕರ್ನಾಟಕ ಭಾಷಿಕ ಪ್ರಾಂತ್ಯವಾಗಿ ಏಕೀಕರಣಗೊಂಡ ವರ್ಷಗಳ ಸಂಖ್ಯೆಗೆ ಆಧಾರಿತವಾಗಿ ಪ್ರತಿ ವರ್ಷವೂ ಪ್ರಶಸ್ತಿಗಳನ್ನು ಮಿತಿಗೊಳಿಸುವುದು ಮತ್ತು ಆಯಾ ವರ್ಷ ಏಕೀಕರಣಗೊಂಡ ವರ್ಷಕ್ಕೆ ಸಮನಾಗಿ ಪ್ರತಿ ವರ್ಷಕ್ಕೆ ಒಂದರಂತೆ ಪ್ರಶಸ್ತಿ ಸಂಖ್ಯಾಮಿತಿ ಏರಿಸುವುದು.
2. ಈ ಪ್ರಶಸ್ತಿಯನ್ನು ಹಲವು ಸಂದರ್ಭಗಳಲ್ಲಿ ರಾಜ್ಯ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಎಂಬ ಹೆಸರುಗಳಿಂದ ಗುರುತಿಸಲಾಗಿದ್ದು. ಈ ಪ್ರಶಸ್ತಿಯನ್ನು ಇನ್ನು ಮುಂದೆ ರಾಜ್ಯೋತ್ಸವ ಪ್ರಶಸ್ತಿ ಎಂದೇ ಗುರುತಿಸುವುದು ಮತ್ತು ಅದರಂತೆ ಕ್ರಮವಹಿಸುವುದು
3. ವಿವಿಧ ಇಲಾಖೆಗಳು ಮತ್ತು ಜಿಲ್ಲಾಡಳಿತಗಳು ನವೆಂಬರ್ ಒಂದರಂದು ನೀಡುತ್ತಿರುವ ಪ್ರಶಸ್ತಿಗಳನ್ನು ಸಹ ರಾಜ್ಯೋತ್ಸವ ಪ್ರಶಸ್ತಿ ಎಂದು ಗುರುತಿಸುತ್ತಿರುವ ಗೊಂದಲವನ್ನುಂಟು ಮಾಡಿದೆ. ಆದ್ದರಿಂದ ಆ ರೀತಿಯ ಪ್ರಶಸ್ತಿಗಳನ್ನು ವಿತರಿಸುವಾಗ ರಾಜ್ಯೋತ್ಸವ ಪ್ರಶಸ್ತಿ ಎಂಬ ಹೆಸರಿನಿಂದ ಗುರುತಿಸತಕ್ಕದ್ದಲ್ಲ.
4. ಈಗಿರುವಂತೆ ವಿಷಯ ಕ್ಷೇತ್ರಗಳನ್ನು ಗುರುತಿಸುವುದು ಮತ್ತು ಹೊಸದಾಗಿ ವಿಕಸನಗೊಳ್ಳುವ ವಿಷಯ ಕ್ಷೇತ್ರಗಳ ಸಾಧಕರನ್ನು ಆರಂಭದಲ್ಲಿ ಸಂಕೀರ್ಣ ಕ್ಷೇತ್ರದಲ್ಲಿ ಗುರುತಿಸುವುದು. ನಂತರದ ದಿನಗಳಲ್ಲಿ ಪ್ರತ್ಯೇಕ ವಿಷಯವಾಗಿ ಗುರುತಿಸಲು ಕ್ರಮ ವಹಿಸುವುದು.
5. ರಾಜ್ಯೋತ್ಸವ ಪ್ರಶಸ್ತಿ ಫಲಕದ ಜೊತೆ ನೀಡುತ್ತಿರುವ ಹಾರ, ಶಾಲು, ಮೈಸೂರು ಪೇಟ, ಹಣ್ಣಿನ ಬುಟ್ಟಿಗಳ ಜೊತೆಗೆ ಚಿನ್ನದ ಪದಕವನ್ನು 25 ಗ್ರಾಂಗಳಿಗೆ ಹೆಚ್ಚಿಸಿ ಪ್ರದಾನ ಮಾಡುವುದು. ಮತ್ತು ಪ್ರಶಸ್ತಿ ಮೊತ್ತವಾಗಿ ಒಂದು ಲಕ್ಷ ರೂಪಾಯಿಗಳನ್ನು ನೀಡುವುದು.
6. ರಾಜ್ಯೋತ್ಸವ ಪ್ರಶಸ್ತಿಯ ಪುರಸ್ಕೃತರನ್ನು ಮರಣೋತ್ತರವಾಗಿ ಆಯ್ಕೆ ಮಾಡುವಂತಿಲ್ಲ.
7. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ನೈತಿಕ ಅಧಃಪತನಕ್ಕೊಳಪಡುವ ಅಪರಾಧ ಹಿನ್ನಲ ಇಲ್ಲದಿರುವುದನ್ನು ಖಾತರಿ ಪಡಿಸಿಕೊಳ್ಳುವುದು. ಯಾವುದೇ ಕ್ಷೇತ್ರದ ಸಾಧಕರನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡುವ ಮುನ್ನ ಆ ವ್ಯಕ್ತಿಯ ಹಿನ್ನಲೆ ಗಮನಿಸುವುದು ಮತ್ತು ಸಮಾಜದಲ್ಲಿ ಗಣನೀಯ ಸಾಧನೆ ಸಲ್ಲಿಸಿದವರೆಂದು ಗುರುತಿಸಲ್ಪಟ್ಟ ವ್ಯಕ್ತಿಗಳನ್ನು ಮಾತ್ರ ಶಿಫಾರಸ್ಸು ಮಾಡುವುದು.
8. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯ ಸಂದರ್ಭದಲ್ಲಿ ಯಾವುದೇ ತಪ್ಪು ಮಾಹಿತಿಗಳ ಆಧಾರದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ್ದಲ್ಲಿ ಅದನ್ನು ಸರ್ಕಾರವು ಹಿಂಪಡೆಯಲು ಅವಕಾಶ ಇರುತ್ತದೆ.
9. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ಸಾಮಾನ್ಯ ಕನಿಷ್ಠ ವಯೋಮಿತಿ 60 ವರ್ಷಗಳನ್ನು ಪೂರೈಸಿರಬೇಕು. ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮನ್ನಣೆ ಗಳಿಸಿದ ಅತಿ ವಿಶೇಷ ಸಾಧಕರ ಪ್ರಕರಣಗಳಲ್ಲಿ ಮಾತ್ರ ವಿನಾಯಿತಿ ನೀಡಲು ಅವಕಾಶವಿರುತ್ತದೆ.
10. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ಸಾಮಾಜಿಕ ನ್ಯಾಯ, ಪ್ರಾದೇಶಿಕ ನ್ಯಾಯ ಮತ್ತು ಲಿಂಗಾಧಾರಿತ ನ್ಯಾಯಗಳನ್ನು ಗಮನದಲ್ಲಿರಿಸಿಕೊಂಡು, ವಿಶೇಷ ಚೇತನ ಸಾಧಕರನ್ನು ಸಹ ಆಯ್ಕೆ ಮಾಡುವುದು. ಹೀಗೆ ಮಾಡುವಾಗ ಜಿಲ್ಲೆಗೆ ಕನಿಷ್ಠ ಒಂದರಂತೆ ಪ್ರಾತಿನಿಧ್ಯ ಒದಗಿಸಲು ಕ್ರಮ ವಹಿಸುವುದು.
11. ಪ್ರತಿ ವಿಷಯ ಕ್ಷೇತ್ರವನ್ನು ಗುರುತಿಸುವಾಗ ಅದರಲ್ಲಿನ ವಿವಿಧ ಶಾಖೆಗಳನ್ನು ಸಹ ಗಮನಿಸುವುದು ಉದಾಹರಣೆಗೆ ವೈದ್ಯಕೀಯ ವಿಭಾಗವನ್ನು ಗುರುತಿಸುವಾಗ, ಆಯುರ್ವೇದ, ಯೋಗ, ಯುನಾನಿ, ಹೋಮಿಯೋಪತಿ, ನಾಟಿವೈದ್ಯ, ಫಿಸಿಯೋಥೆರಪಿ, ಆಪ್ತ ಸಮಾಲೋಚನೆ, ಸಂಶೋಧನೆ ಹೀಗೆ ಸಾಧ್ಯವಾದ ಎಲ್ಲ ಕ್ಷೇತ್ರಗಳನ್ನು ಆದ್ಯತೆಯ ಮೇಲೆ ಪ್ರತಿವರ್ಷವೂ ಗುರುತಿಸಲು ಕ್ರಮ ವಹಿಸುವುದು.

12. ಶಿಕ್ಷಣ, ಆರೋಗ್ಯ ಇನ್ನಿತರ ಕ್ಷೇತ್ರಗಳನ್ನು ಗುರುತಿಸುವಾಗ ಆಯಾ ಕ್ಷೇತ್ರದ ತಜ್ಞರನ್ನು ಮತ್ತು ಸಾಧಕರನ್ನು ಮಾತ್ರ ಪರಿಗಣಿಸಬೇಕು. ಇದು ಎಲ್ಲ ಕ್ಷೇತ್ರಗಳಲ್ಲಿಯೂ ಅನ್ವಯವಾಗುತ್ತದೆ.
13. ಚಾಲ್ತಿಯಲ್ಲಿರುವ ರಾಜ್ಯ ಪ್ರಶಸ್ತಿ ಸಲಹಾ ಸಮಿತಿ ಸದಸ್ಯರು, ಅಕಾಡೆಮಿಯ ಪದಾಧಿಕಾರಿಗಳು ಮತ್ತು ಪ್ರಶಸ್ತಿ ಸಲಹಾ ಸಮಿತಿಯಲ್ಲಿರುವ ತಜ್ಞ ಸದಸ್ಯರು ತಮಗೆ ತಾವೇ ಪ್ರಶಸ್ತಿ ಕೊಟ್ಟುಕೊಳ್ಳುವಂತಿಲ್ಲ ಮತ್ತು ಸ್ವತಃ ಶಿಫಾರಸ್ಸು ಮಾಡಿಕೊಳ್ಳುವಂತಿಲ್ಲ ಅಥವ ಪರಸ್ಪರ ಶಿಫಾರಸ್ಸು ಮಾಡಿಕೊಳ್ಳುವಂತಿಲ್ಲ.
14. ಇತರ ಯಾವುದೇ ಪ್ರಶಸ್ತಿಗಳನ್ನು ಪಡೆದಿರುವುದು ರಾಜ್ಯೋತ್ಸವ ಪ್ರಶಸ್ತಿ ನೀಡಿಕೆಗೆ ತಡೆಯಾಗಬಾರದು.
15. ಪ್ರತಿ ವ್ಯಕ್ತಿಯ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಅವರ ಸಾಧನೆಯನ್ನು ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಬಹುದು.
16. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಲಹಾಸಮಿತಿಗೆ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ತಜ್ಞ ಸದಸ್ಯರನ್ನು ಸತತವಾಗಿ ಎರಡು ವರ್ಷಗಳ ಅವಧಿಗೆ ಮುಂದುವರೆಸುವಂತಿಲ್ಲ.
17. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಲಹಾ ಸಮಿತಿಯನ್ನು ರಚಿಸುವುದು. ಹೀಗೆ ರಚಿಸುವಾಗ ಸಾಮಾಜಿಕ ನ್ಯಾಯ, ಪ್ರಾದೇಶಿಕ ನ್ಯಾಯ ಮತ್ತು ಲಿಂಗಾಧಾರಿತ ನ್ಯಾಯವನ್ನು ಸಾಧ್ಯವಾದಷ್ಟು ಅನುಸರಿಸಬೇಕು.
18. ಯಾವುದೇ ಕ್ಷೇತ್ರದ ವ್ಯಕ್ತಿಯನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡುವ ಮುನ್ನ ವ್ಯಕ್ತಿಯ ಹಿನ್ನೆಲೆ, ಮತ್ತು ವಿಷಯ ಕ್ಷೇತ್ರದಲ್ಲಿ ಗಣನೀಯ ಸಾಧನೆಯನ್ನು ಪರಿಗಣಿಸಿ ಶಿಫಾರಸ್ಸು ಮಾಡುವುದು.

19. ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವ ವಿಧಾನ:-
    - ಸಾರ್ವಜನಿಕ ಪ್ರಸ್ತಾವನೆಗಳು, ಸಂಘ-ಸಂಸ್ಥೆಗಳ ಸೂಚನೆಗಳು, ಜಿಲ್ಲಾ ಸಹಾಯಕ ನಿರ್ದೇಶಕರ ಕಚೇರಿ ಮೂಲಕ, ಸರ್ಕಾರದ ವಿವಿಧ ಇಲಾಖೆಗಳ ಮೂಲಕ, ಅಕಾಡೆಮಿ-ಪ್ರಾಧಿಕಾರಗಳ ಮೂಲಕ, ಜನಪ್ರತಿನಿಧಿಗಳ ಮೂಲಕ ಸಲ್ಲಿಸುವ ನಾಮನಿರ್ದೇಶನಗಳು ಮತ್ತು ಸಾಧಕರ ಸ್ವಯಂ ಪ್ರಸ್ತಾವನೆ ಸಲ್ಲಿಕೆಯ ಮೂಲಕ ವೈಯಕ್ತಿಕ ವಿವರಗಳ ಸಲ್ಲಿಕೆಗೆ ಅವಕಾಶವನ್ನು ಒದಗಿಸುವುದು.
    - ಹೀಗೆ ಸಲ್ಲಿಕೆಯಾದ ವಿವರಗಳನ್ನು ಸಲಹಾ ಸಮಿತಿಯು ಪರಿಶೀಲಿಸಿ, ತನ್ನ ಗಮನಕ್ಕೆ ಬರುವ ಇತರ ಹೆಸರುಗಳನ್ನು ಅವಶ್ಯವಿದ್ದಲ್ಲಿ ಸೇರ್ಪಡೆಗೊಳಿಸಬಹುದು.
    - ಸಂಬಂಧಿತ ವಿಷಯಕ್ಷೇತ್ರ ತಜ್ಞರ ಅಭಿಪ್ರಾಯ ಪಡೆದು ಅಂತಿಮವಾಗಿ 1:2 ಅನುಪಾತದಲ್ಲಿ ಆಯ್ಕೆ ಸಮಿತಿಯ ಪರಾಮರ್ಶೆ ಮತ್ತು ಅಂತಿಮ ಆಯ್ಕೆಗಾಗಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳ ಮೂಲಕ ಪ್ರಶಸ್ತಿ ಆಯ್ಕೆ ಸಮಿತಿಯ ಮುಂದೆ ಮಂಡಿಸುವುದು.
    - ಆಯ್ಕೆ ಸಲಹಾ ಸಮಿತಿಯು ಸಲ್ಲಿಸಿದ 1:2 ಅನುಪಾತದ ಪಟ್ಟಿಯಿಂದಲೇ ಅಂತಿಮವಾಗಿ ಪುರಸ್ಕೃತರನ್ನು ಆಯ್ಕೆ ಸಮಿತಿಯು ಅಂತಿಮಗೊಳಿಸಬೇಕು.
    - ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಗಾಗಿ ನಡೆಸುವ ಸಭೆಯಲ್ಲಿ ಆಯ್ಕೆ ಸಲಹಾ ಸಮಿತಿಯ ಸದಸ್ಯರನ್ನು ಸಹ ಸಭೆಗೆ ಕಡ್ಡಾಯವಾಗಿ ಆಹ್ವಾನಿಸುವುದು.
    - ಆಯ್ಕೆ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ರೂಪಿಸಿದೆ.

| | |
|---|---|
| ಪ್ರಸ್ತಾವನೆಗಳ ಸಲ್ಲಿಕೆಗೆ ಕಾಲಾವಧಿ | : ಸೆಪ್ಟೆಂಬರ್ 01 ರಿಂದ 30ರವರೆಗೆ |
| ಆಯ್ಕೆ ಸಲಹಾ ಸಮಿತಿ ಪರಿಶೀಲನೆ ಶಿಫಾರಸ್ಸು ಪ್ರಕ್ರಿಯೆಗೆ | : ಅಕ್ಟೋಬರ್ 01 ರಿಂದ 15ರವರೆಗೆ |
| ಆಯ್ಕೆ ಸಮಿತಿಯ ಆಯ್ಕೆ ಪ್ರಕ್ರಿಯೆಗಳು | : ಅಕ್ಟೋಬರ್ 15 ರಿಂದ 25ರವರೆಗೆ |

Malathi PS 2/2/17

(ಪಿ.ಎಸ್.ಮಾಲತಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.

(ಸಂಸ್ಕೃತಿ ಶಾಖೆ)